# ಮಧುರ ಗಾಯಕ ರಾಮಪ್ರಸಾದ

**ಸ್ವರ್ಣಗೌರಿ**

*ಶ್ರೀರಾಮಪ್ರಸಾದನ ಹಾಡುಗಳನ್ನು ಕೇಳದ, ಮೆಚ್ಚದ ಶ್ರೀರಾಮಕೃಷ್ಣ ಭಕ್ತರಿಲ್ಲ. ಅವನ ಜೀವನದ ಪರಿಚಯವೂ ಇದ್ದರೆ ಆ ಮೆಚ್ಚಿಕೆಗೆ ಇನ್ನೂ ಪುಷ್ಟಿ ದೊರೆಯುತ್ತದೆ. ಆ ಸಂತನ ಕಿರುಪರಿಚಯ ಮಾಡಿಕೊಟ್ಟಿರುವ ಕುಮಾರಿ ಸ್ವರ್ಣಗೌರಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.*

ಶ್ರೀರಾಮಕೃಷ್ಣ ವಚನವೇದದಲ್ಲಿ ಒಂದು ಪ್ರಸಂಗ ಬರುತ್ತದೆ. ಗಂಟೆ ರಾತ್ರಿ ಏಳು. (ಶ್ರೀರಾಮಕೃಷ್ಣ ಪರಮಹಂಸರ ಗಂಟಲು ವ್ಯಾಧಿಗೆ ಚಿಕಿತ್ಸೆ ನೀಡುತ್ತಿದ್ದ) ಡಾಕ್ಟರ್ ಸರ್ಕಾರನಿಗೆ ಕೆಲವು ಹಾಡುಗಳನ್ನು ಕೇಳಬೇಕೆಂಬ ಇಚ್ಛೆಯಾಯಿತು. ಪರಮಹಂಸರ ಆಜ್ಞಾನುಸಾರ ಮಾಸ್ಟರ್ ಇನ್ನೊಬ್ಬ ಭಕ್ತನೊಡನೆ ರಾಮಪ್ರಸಾದನ ಹಾಡನ್ನು ಹಾಡಲಾರಂಭಿಸಿದನು:

ದೇವದೇವನ ನಿಜವನರಿಯಲು
ಮನವು ತೊಳಲುತ ಬಳಲಿದೆ...

ಬಳಿಕ ಹಾಡಿದನು:

ತಾಯಿ ದುರ್ಗೆಯ ನಿಜವನರಿಯುವ
ಧೀರರಾರೋ ಜಗದೊಳು
ಆರು ದರುಶನ ವೇದಶಾಸ್ತ್ರ
ಪುರಾಣವರಿಯದು ಅವಳನು...

ಮತ್ತೆ ಹಾಡುತ್ತಿದ್ದಾನೆ:

ನಿನ್ನ ಬಾಳಿನ ಹೊಲವು ಪಾಳು
ಬಿದ್ದಿಹುದಲ್ಲೋ
ಕೃಷಿಗೈಯಲೂ ಕೂಡ ತಿಳಿಯದಿರುವೆ!
ಎಂಥ ಹೊನ್ನನು ಬೆಳೆದು
ತೆಗೆಯಬಹುದಾಗಿತ್ತೊ
ಕೆಲವು ದಿನ ಮೈಮುರಿದು ದುಡಿದಿದ್ದರೆ!

ರೆಪ್ಪೆ ಹೊಡೆಯುವುದರೊಳಗಾಗಿ ಪರಮಹಂಸರು ಗಾಢ ಸಮಾಧಿಸ್ಥರಾಗಿಬಿಟ್ಟರು. ಏನು ಆಶ್ಚರ್ಯ! ಭಕ್ತರ ಕಣ್ಣೆದುರಿಗೇನೆ ಈ ಅದ್ಭುತ ರೂಪಾಂತರ ಪರಮಹಂಸರಲ್ಲಿ ಸಂಭವಿಸಿಬಿಟ್ಟಿತು! ಅವರ ಮುಖ ಜ್ಯೋತಿಯನ್ನು ಚೆಲ್ಲುತ್ತಿತ್ತು, ಶರೀರ ಸ್ಪಂದಹೀನ, ಬಾಹ್ಯಜ್ಞಾನ ಶೂನ್ಯವಾಗಿದೆ. ಎಲ್ಲರೂ ಆಶ್ಚರ್ಯಚಕಿತರಾಗಿ ಪರಮಹಂಸರ ರೂಪಿನಲ್ಲಿ ಆವಿರ್ಭಾವವಾಗಿರುವ ಈ ಅದ್ಭುತ ವರಾಭಯದಾಯಿನಿ ಜಗನ್ಮಾತೆಯ ದರ್ಶನ ಮಾಡುತ್ತಿದ್ದರು.

"ಮಧುರಗಾಯಕ ಸಂತ" (Melodious Mystic) ಎಂದೇ ಬಂಗಾಳದಲ್ಲಿ ಸುಪ್ರಸಿದ್ಧನಾದ ಶ್ರೀರಾಮಪ್ರಸಾದನ ಹಾಡುಗಳೆಂದರೆ ಪರಮಹಂಸರಿಗೆ ಅಚ್ಚುಮೆಚ್ಚು. ಅವುಗಳನ್ನು ದೇವಿಯ ಎದುರು ಹಾಡುತ್ತಾ ಹಾಡುತ್ತಾ ಮೈಮರೆಯುತ್ತಿದ್ದರು. ಗಾಢ ಸಮಾಧಿಸ್ಥರಾಗುತ್ತಿದ್ದರು. ಭಕ್ತ ರಾಮಪ್ರಸಾದನ ಜೀವನ ಚರಿತ್ರೆ ಅಮೋಘವಾದದ್ದು. ಸಾಧಕರಿಗೆ ಸ್ಫೂರ್ತಿದಾಯಕವೂ ಹೌದು. ಆತನ ಹಾಡುಗಳು ಭಕ್ತಿರಸದಲ್ಲಿ ತೋಯ್ದಂತಿವೆ.

ಕ್ರಿ.ಶ. ೧೭೨೩ರಂದು ಬಂಗಾಳ ದೇಶದ ಕುಮಾರ ಹಟ್ಟಾ ಎಂಬ ಹಳ್ಳಿಯೊಂದರಲ್ಲಿ ರಾಮರಾಮಸೇನ್ ಹಾಗೂ ಸಿದ್ಧೇಶ್ವರಿ ಎಂಬ ದಂಪತಿಗಳಿಗೆ ಜನಿಸಿದ ಪುತ್ರರತ್ನ ರಾಮಪ್ರಸಾದ. ಹದಿನೆಂಟು ವರ್ಷದ ನವಯುವಕನ ಮನಸ್ಸಿನಲ್ಲಿ ಆಧ್ಯಾತ್ಮಿಕ ಪ್ರವೃತ್ತಿ ಜಾಗೃತವಾಯಿತು. ಸಂಸಾರದಲ್ಲಿ ವಿರಕ್ತಿ ಹೊಂದಿದ. ಈತನ ಈ ವೈರಾಗ್ಯಭಾವವನ್ನು ಕಂಡು ಕಳವಳಗೊಂಡ ಮಾತಾಪಿತರು ಶರ್ವಾಣಿ ಎಂಬ ಸುಂದರ ಯುವತಿಯೊಡನೆ ರಾಮಪ್ರಸಾದನ ವಿವಾಹ ಮಾಡಿದರು. ಪರಮೇಶ್ವರಿ, ಜಗದೀಶ್ವರಿ, ರಾಮದುಲಾಲ ಹಾಗೂ ರಾಮಮೋಹನ ಎಂಬ ನಾಲ್ಕು ಮಕ್ಕಳ ಜನನವಾಯಿತು. ಸಂಸಾರದಲ್ಲಿದ್ದರೂ ತಾಯಿಯ ಭಕ್ತನಾದ ರಾಮಪ್ರಸಾದನ ಮನಸ್ಸು ತೀವ್ರವಾದ ವಿರಹದ ನೋವನ್ನು ಅನುಭವಿಸುತ್ತಿತ್ತು. ಹಗಲಿರುಳೂ ಆಧ್ಯಾತ್ಮಿಕ ಸಾಧನೆಗಳಲ್ಲೆ ದಿನಗಳೆಯುತ್ತಿದ್ದನು. ದೀಕ್ಷಾ ಗುರುಗಳ ದೈವಾಧೀನರಾದ ಬಳಿಕ ಆಗಮ ವಾಗೀಷ ಎಂಬ ಸಿದ್ಧಗುರುಗಳ ಬಳಿ ತಾಂತ್ರಿಕಸಾಧನೆಯಲ್ಲಿ ಉದ್ಯುಕ್ತನಾದ ರಾಮಪ್ರಸಾದನು ಅದರಲ್ಲಿ ಸಂಪೂರ್ಣವಾಗಿ ಮನಸ್ಸನ್ನು ತೊಡಗಿಸಿದ. ಇಂತಹ ಸಮಯದಲ್ಲಿ ರಾಮಪ್ರಸಾದನ ಜೀವನದಲ್ಲಿ ಒಂದು ಬರಸಿಡಿಲು ಬಂದೆರಗಿತು. ತಂದೆಯ ದೇಹಾಂತವಾಯಿತು. ಸಂಸಾರದ ಭಾರವನ್ನು ಹೊರಲರಿಯದ ಈ ಭಕ್ತನು ಏನು ತಾನೆ ಮಾಡಿಯಾನು? ಜಗತ್ತಿಗೇ ತಾಯಿಯಾದ ಆ ಭಗವತಿಯ ಮೊರೆಹೊಕ್ಕ:

ನೋಡು ತಾಯೆ, ನಿನ್ನ ಭಕ್ತನ ಚಲುವದೆಂಥ ಚಿತ್ರವು
ಕೌಪವೊಂದಕೂ ಚೂರು ಬಟ್ಟೆಯ ಗತಿಯು ಆತಗೆ ಇಲ್ಲವು !
ಬೂದಿಯಿಂದಲೇ ತನುವಲಂಕೃತಿ ಅವನ ಪಾಲಿನ ಭಾಗ್ಯವು.
ಗಂಟುಗೂದಲ ತಲೆಯ ಹೊತ್ತವನಾಗಿ ಅಲೆವನು ಆತನು.

ಸಾಮಾನ್ಯ ನಂಬಿಕೆಗಳ ವಿರುದ್ಧವಾಗಿ ತಾಯಿಯ ಕೃಪೆಯು ಸಮೃದ್ಧಿಯ ರೂಪದಲ್ಲಿ ಅಲ್ಲದೆ ದಾರಿದ್ರ್ಯದ ರೂಪದಲ್ಲೂ ಬರುತ್ತದೆ. ಒಂದೆಡೆ ಸಂಸಾರ ಬಂಧನ, ಇನ್ನೊಂದೆಡೆ ತಾಯಿಯ ದರ್ಶನಕ್ಕಾಗಿ ಅಪಾರ ವ್ಯಾಕುಲತೆ. ಇಂತಹ ಸ್ಥಿತಿಯಲ್ಲಿ


ಕೆಲಸಕ್ಕಾಗಿ ಬಾಗಿಲು ಬಾಗಿಲು ಅಲೆಯಬೇಕಾಯಿತು. ಈ ಝಂಜಾಟಗಳಿಂದ ದೂರ ಓಡಿಹೋಗಿ ಸಾಧನೆಯಲ್ಲಿ ಮುಳುಗಲು ಪ್ರತಿಕ್ಷಣವೂ ಕಾತರಿಸುತ್ತಿತ್ತು ಆತನ ಮನ! ಕೊನೆಗೆ ದುರ್ಗಾಚರಣ ಮಿತ್ರ ಎಂಬುವರ ಬಳಿ ತಿಂಗಳಿಗೆ ರೂ.೩೦ ಸಂಬಳದ ಗುಮಾಸ್ತನ ಉದ್ಯೋಗ ದೊರೆಯಿತು. ತಾಯಿಯ ಮೇಲಿನ ಕೃತಜ್ಞತೆಯಿಂದ ಈ ಭಕ್ತನ ಹೃದಯವು ಆನಂದದಿಂದ ತುಂಬಿ ತುಳುಕಾಡಿತು. ಪರಿಣಾಮವಾಗಿ ಲೆಕ್ಕ ಬರೆಯಲು ಇದ್ದ ಪುಸ್ತಕಗಳೆಲ್ಲಾ ತಾಯಿಯ ಸಂಕೀರ್ತನೆಗಳಿಂದ ತುಂಬಿ ಹೋದವು!! ಆನಂದಾತಿರೇಕದಲ್ಲಿ ಏನು ಮಾಡುತ್ತಿದ್ದೇನೆ ಎಂಬ ಪರಿವೆಯೆ ಇಲ್ಲದಾಯಿತು. ಹೃದಯಾಂತರಾಳದಿಂದ ಹೊರಹೊಮ್ಮಿದ ಹಾಡುಗಳಿಂದಲೇ ಲೆಕ್ಕದ ಪುಸ್ತಕಗಳೆಲ್ಲ ತುಂಬಿಹೋದವು. ಈ ಹುಚ್ಚುತನವನ್ನು ಸಹಿಸಲಾರದ ಸಹೋದ್ಯೋಗಿಗಳು ಯಜಮಾನನ ಬಳಿಗೆ ದೂರನ್ನು ಕೊಂಡೊಯ್ದರು. ಪುಸ್ತಕಗಳನ್ನೆಲ್ಲಾ ಜಪ್ತಿ ಮಾಡಲುದ್ಯುಕ್ತವಾದ ಯಜಮಾನನ ಕಣ್ಣಿಗೆ:

**ನಿನ್ನ ದಾಸನು ನಾನು ಸಂಬಳವು ಎನಗಿಲ್ಲ,**
**ನಿನ್ನ ಪಾದಧೂಳಿಗೆ ಮಾತ್ರ ಎನಗಿಹುದು ಅಧಿಕಾರ**

ಎಂಬ ಚರಣಗಳು ಬಿದ್ದಾಕ್ಷಣವೇ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯತೊಡಗಿತು. ಕೂಡಲೇ ಆ ತಾಯ ಭಕ್ತನನ್ನು ಕೆಲಸದಿಂದ ಮುಕ್ತಗೊಳಿಸಿ ಮನೆಗೆ ಕಳುಹಿಸಿದ್ದಲ್ಲದೆ, ಪ್ರತಿ ತಿಂಗಳ ಸಂಬಳವೂ ಮನೆ ತಲುಪುವ ವ್ಯವಸ್ಥೆಯೂ ಆಯಿತು. ಈ ಸಂತೋಷದ ಸುದ್ದಿ ಕಿವಿಗೆ ಬಿದ್ದಾಕ್ಷಣವೇ ರಾಮಪ್ರಸಾದನು ತಾಯಿಯನ್ನು ಸ್ತುತಿಸತೊಡಗಿದ:

**ಎಲೆ ಮನವೆ, ಏಕಿಂತು ನೀ ಮೂರ್ಖನಾದೆ,**
**ನೀ ಭಿಕ್ಷುವಲ್ಲದುದ ನಿಜ ತಿಳಿಯದಾದೆ,**
**ಕ್ಷಣಿಕ ಐಸಿರಿಗಾಗಿ ಅಲೆದಾಟವೇಕೆ?**
**ನಿನ್ನ ಮನೆಯಲೆ ಇರುವ ಶಾಶ್ವತದ ಸಿರಿಯನ್ನು**
**ಮನೆಯೊಳಗೆ ನೀನಿದ್ದು ಸವಿಯಬಹುದಾಗಿತ್ತು!**

ಇಷ್ಟುದಿನ ತಡೆಯಾಗಿದ್ದ ಸಂಸಾರದ ಹೊಣೆಯು ಹೆಗಲಿನಿಂದ ಜಾರಿದ ಕಾರಣ ರಾಮಪ್ರಸಾದನು ಮೊದಲಿನಂತೆ ಸಾಧನೆಯಲ್ಲಿ ಮುಳುಗಿದ. ಹೃದಯಗಂಗೆಯು ಚಿಮ್ಮಿ, ಅಲೆಗಳಂತೆ ಹರಿಯತೊಡಗಿತು ಹಾಡುಗಳು. ಕಂಠದವರೆಗೂ ಗಂಗೆಯಲ್ಲಿ ನಿಂತು ಮೈಮರೆತು ಗಂಟೆಗಟ್ಟಲೆ ಹಾಡುತ್ತಿದ್ದನು. ಸುತ್ತಮುತ್ತಲ ಜನರೆಲ್ಲಾ ಆಕರ್ಷಿತರಾಗುತ್ತಿದ್ದರು. ಒಮ್ಮೆ ದೋಣಿವಿಹಾರಕ್ಕೆಂದು ಬಂದ ನವದ್ವೀಪದ ಮಹಾರಾಜ ಕೃಷ್ಣಚಂದ್ರನು ಹಾಡನ್ನು ಕೇಳಿ ಸುಪ್ರೀತನಾಗಿ ತನ್ನ ಆಸ್ಥಾನವನ್ನು ಅಲಂಕರಿಸಬೇಕೆಂದು ಆಮಂತ್ರಿಸಿದ. ರಾಮಪ್ರಸಾದನು ಇದನ್ನು ಕೇಳಿ ಆನಂದಿಸುವ ಬದಲು ಸ್ತಂಭೀಭೂತನಾದ! ವಿನಯದಿಂದ ಆಹ್ವಾನವನ್ನು ತಿರಸ್ಕರಿಸಿದ. ಆದರೆ ಮಹಾ



ದೋಣಿವಿಹಾರಕ್ಕೆಂದು ಬಂದ ನವದ್ವೀಪದ ಮಹಾರಾಜ ಕೃಷ್ಣಚಂದ್ರನು ರಾಮಪ್ರಸಾದನ ಹಾಡನ್ನು ಕೇಳಿ ಸುಪ್ರೀತನಾಗಿದ

ರಾಜನು ಅಷ್ಟು ಸುಲಭವಾಗಿ ಒಪ್ಪುವನೆ? ನೂರು ಎಕರೆ ಜಮೀನನ್ನು ಆತನ ಜೀವನಾಂಶಕ್ಕೆಂದು ದಾನ ಮಾಡಿದನು. ತಾಯಿಯನ್ನೆ ನೆಚ್ಚಿ, ನಂಬಿ ನಡೆಯುವ ಭಕ್ತನ ಹೊಣೆಯನ್ನು ಹೊರುವುದು ಆಕೆಯ ಜವಾಬ್ದಾರಿಯಲ್ಲವೇ?

**ಅನನ್ಯಾಶ್ಚಿಂತಯಂತೋ ಮಾಂ**
**ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ**
**ಯೋಗಕ್ಷೇಮಂ ವಹಾಮ್ಯಹಮ್॥** (ಗೀತೆ :೯:೨೨)

"ಬೇರಾವ ಚಿಂತನೆಯೂ ಇಲ್ಲದೆ ಸದಾ ನನ್ನನ್ನೇ ಚಿಂತಿಸುತ್ತ ಯಾರು ನನ್ನನ್ನೇ ಉಪಾಸಿಸುತ್ತಾರೊ, ನನ್ನಲ್ಲೇ ಶಾಶ್ವತವಾಗಿ ನೆಟ್ಟ ಮನಸ್ಸುಳ್ಳ ಅಂಥವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ," ಎಂದು ಪರಮಾತ್ಮನು ಭರವಸೆಯನ್ನು ನೀಡಿಲ್ಲವೆ? ಮನೆಯ ಆರ್ಥಿಕ ವ್ಯವಸ್ಥೆಯನ್ನು ತಾಯಿಯೇ ಹೊತ್ತಮೇಲೆ ಮತ್ತಷ್ಟು ತೀವ್ರವಾದ ಸಾಧನೆಯಲ್ಲಿ ಮುಳುಗಿದ. ದಿನಕ್ಕೆ ಎರಡು ಬಾರಿ ಊಟಕ್ಕಾಗಿ ಮಾತ್ರವೇ ಮನೆಗೆ ಬರುತ್ತಿದ್ದ. ಏಕಾದಶಿ, ಹುಣ್ಣಿಮೆ ಮತ್ತು ಅಮಾವಾಸ್ಯೆಯ ದಿನಗಳಂತೂ ಮನೆಗೇ ಹೋಗುತ್ತಿರಲಿಲ್ಲ. ಪಂಚವಟಿಯ ಕೆಳಗೆ ಪಂಚಮುಂಡಿ ಆಸನದ ಮೇಲೆ ಸಾಧನೆ ನಿಷ್ಠೆಯಿಂದ ನಡೆಯತೊಡಗಿತು. ತಾಯಿಯನ್ನು ಕಾಣದ ಆ ವಿರಹದ ನೋವು ಹಾಡಿನ ರೂಪದಲ್ಲಿ ಹೊರಹೊಮ್ಮಿತು:

**ಹೇ ತಾಯಿ, ಇನ್ನೆಷ್ಟು ದಿನ ನಾನು ಹೀಗೇ ಇರಬೇಕು...!**
**ಇನ್ನು ನಾ ನಿನ್ನನ್ನು ಕರೆಯೆ 'ಅಮ್ಮ' ಎಂದು**
**ಎನಿತೊ ಕಷ್ಟವ ಕೊಟ್ಟೆ, ಕೊಡುತಲೂ ಇರುವೆ!**
**ನೀ ಕೊಡುವ ಕಷ್ಟಕ್ಕೆ ಕೊನೆಯುಂಟೆ ಹೇಳಮ್ಮ!**



ರಾಮಪ್ರಸಾದ ಬೇಲಿಯನ್ನು ಸರಿಪಡಿಸುತ್ತಿರುವಾಗ ದೇವಿಯೆ ಮಗಳ ರೂಪದಲ್ಲಿ ಸಹಾಯಕ್ಕಾಗಿ ಬಂದುದು

ದೇವರಿಗಾಗಿ ಪ್ರಾಪಂಚಿಕ ವಿಷಯ, ಕಾಮೋಪಭೋಗಗಳನ್ನು ತ್ಯಜಿಸಿ ಇನ್ನೂ ಆ ಆನಂದದ, ಜ್ಞಾನದ ಸವಿಯನ್ನು ಕಾಣದ ಭಕ್ತನ ಆ ದಾರುಣ ನೋವನ್ನು ಸಾಧಾರಣ ಮನುಷ್ಯರು ಅರಿಯಲಾರರು.

ಒಂದು ದಿನ ಇದ್ದಕ್ಕಿದ್ದಂತೆ ಈತನ ಸಾಧನೆಗೆ, ಜೀವನಕ್ಕೆ ಬೆಲೆ ಹಾಗೂ ಅರ್ಥವನ್ನು ನೀಡಲು ತಾಯಿಯು ತೋಟದಲ್ಲಿ ದರ್ಶನವಿತ್ತಳು. ಪರಿಣಾಮವಾಗಿ ಆತನ ಮೈಕಾಂತಿಯೇ ಬದಲಾಗಿಹೋಯಿತು. ದೇಹದಿಂದ ಅಪೂರ್ವವಾದ ಜ್ಯೋತಿಯು ಹೊರಹೊಮ್ಮತೊಡಗಿತು. ಒಮ್ಮೆ ಮುರಿದು ಹೋದ ಬೇಲಿಯನ್ನು ಸರಿಪಡಿಸುತ್ತಿರುವಾಗ ಆ ದೇವಿಯೆ ಮಗಳ ರೂಪದಲ್ಲಿ ಸಹಾಯಕ್ಕಾಗಿ ಬಂದ ಘಟನೆಯಿಂದ ಕೃತಕೃತ್ಯನಾಗಿ ಹಾಡತೊಡಗಿದ!

ಇದೆಂಥ ದುರದೃಷ್ಟ! ಮಗಳರೂಪದಿ ಬಂದ
ತಾಯಿಯನು ಕಣ್ಣಮ್ಮ ಕಾಣಲಾರದೆ ಹೋದೆ!

ಇನ್ನೊಮ್ಮೆ ಕಾಶಿಯಿಂದ ಅನ್ನಪೂರ್ಣೆಯೇ ಸುಂದರ ಯುವತಿಯ ರೂಪದಲ್ಲಿ ಈತನ ಹಾಡುಗಳನ್ನು ಕೇಳಲು ಬಂದಳಂತೆ ! ಹೀಗೆ ಎಷ್ಟೋ ದಿವ್ಯ ಘಟನೆಗಳು ನಡೆಯತೊಡಗಿದವು ರಾಮಪ್ರಸಾದನ ಜೀವನದಲ್ಲಿ. ಮತ್ತಷ್ಟು ತೀವ್ರವಾಯಿತು ಸಾಧನೆ. ಹಗಲಿರುಳೂ ಆಹಾರ, ನಿದ್ರೆಗಳನ್ನು ತೊರೆದು ತಾಯಿಯ ಆನಂದದಲ್ಲಿ ಮಗ್ನನಾಗಿರುತ್ತಿದ್ದ. ಬಾಹ್ಯಪ್ರಜ್ಞೆಯೇ ಕಳೆದುಹೋಗುತ್ತಿತ್ತು. ಪೂಜಾವಿಧಿಗಳನ್ನು ಅನುಸರಿಸುವುದು ಕಷ್ಟವಾಗುತ್ತಿತ್ತು. ತಾಯಿಯ ಆ ನಿರಾಕಾರ ಸ್ವರೂಪದ ದರ್ಶನದಿಂದ ಆನಂದಭರಿತನಾದ ರಾಮಪ್ರಸಾದ ಹಾಡತೊಡಗಿದ:

ವೇದಗಳಂತೆಯೆ ದಿಟವಿದು ನೋಡಾ,
ನಿರಾಕಾರಳಿಹಳೆನ್ನಯ ತಾಯಿ.
ಲೋಹ ಲೋಷ್ಠ ಶಿಲೆಯಲಿ ತಾಯಿಯ
ಮೂರ್ತಿಯ ಮಾಡಿದೊಡೇನು ಫಲ?
ನೀ ಮನವನೇ ಆಕೆಯ ಮೂರ್ತಿಯನಾಗಿಸಿ
ನಿನ್ನಯ ಹೃದಯದ ಪೀಠದಲಿರಿಸು



ರಾಮಪ್ರಸಾದನ
ದೇಹಾವಸಾನ

ಪ್ರತಿ ವರ್ಷ ದೀಪಾವಳಿಯ ರಾತ್ರಿ ರಾಮಪ್ರಸಾದನು ತಾನೇ ಸರ್ವ ಪರಿಕರಗಳೊಡನೆ ಅತ್ಯಂತ ಭಕ್ತಿಭಾವದಿಂದ ಕಾಳೀಪೂಜೆ ಮಾಡುತ್ತಿದ್ದನು. ಒಂದು ವರ್ಷ ಇದೇ ರೀತಿ ಕಾಳೀಪೂಜೆ ನೆರವೇರಿತು. ಮರುದಿನ ಬೆಳಗ್ಗೆ ಕಾಳೀ ವಿಸರ್ಜನೆಯ ಸಮಯ. ರಾಮಪ್ರಸಾದನೇ ಪವಿತ್ರಜಲದ ಕುಂಭವನ್ನು ತಲೆಯ ಮೇಲಿರಿಸಿಕೊಂಡು ಭಾವೋನ್ಮತ್ತನಾಗಿ ಹಾಡುತ್ತ ಗಂಗಾನದಿಯಲ್ಲಿ ಮುನ್ನಡೆದನು. ಹೀಗೆ ಹೋಗುತ್ತಿದ್ದಂತೆಯೇ ಆತನ ಪ್ರಾಣಪಕ್ಷಿ ಹಾರಿಯೋಯಿತು. ಅವನು ಜಗನ್ಮಾತೆಯೊಡನೆ ಒಂದಾದ.

ಸಂತನ ಆತ್ಮದಂತಿರುವ ಹಾಡುಗಳು ದೈವತ್ವದಲ್ಲಿ ಸಮಾಗಮ ಹೊಂದಿ ಗಾಯನ ಲೋಕದಲ್ಲಿ ಶಾಶ್ವತವಾಗಿ ಉಳಿಯುವಂತಹ ಅಮೋಘ ಘಟನೆಗಳು ಬಹುಶಃ ನಮ್ಮ ಭಾರತದೇಶದ ಚರಿತ್ರೆಯಲ್ಲಿ ಮಾತ್ರವೇ ಕಾಣಬಹುದು. ತ್ಯಾಗರಾಜ, ತುಕಾರಾಮ, ಮೀರಾಬಾಯಿ ಮುಂತಾದ ಸಂತ ಶ್ರೇಷ್ಠರಲ್ಲಿ ಒಬ್ಬರಾದ ರಾಮಪ್ರಸಾದರ ಸಂಕೀರ್ತನೆಗಳು ಬಂಗಾಳಿ ಭಾಷೆಯ ಆಧ್ಯಾತ್ಮಿಕ ಸಂಪತ್ತಾಗಿ ಇಂದಿಗೂ ಇವೆ.

(ಚಿತ್ರಗಳು: *ಶ್ರೀವಿಶ್ವರಂಜನ ಚಕ್ರವರ್ತಿ*, Ramprasad, The Melodious Mystic *ಗ್ರಂಥದಿಂದ ಸಂಗ್ರಹಿಸಿದವುಗಳು*)